SRI A. LAKSHMISAGAR.—Sir, many of the owners of the properties on either side of the road are facing certain difficulties. Some of them want to sell their properties and some of them want to put up new construction. So, sellers and buyers and also other persons connected there to, are not in a position to complete the transactions for want of finalisation of the acquisition proceedings. Why should they be prevented from making these deals? Will the Hon. Minister assure to complete the process of acquisition of properties atleast by the end of this year?

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು ಹೇಳಿದಂತೆ land acquire ಮಾಡಿಕೊಳ್ಳಬೇಕಾದರೆ ಸ್ವಲ್ಪ ಕಷ್ಟವಿದೆ. ಆರ್ಥಿಕವಾಗಿ ತೊಂದರೆಯಾಗಬಹುದೆಂಬ ದೃಷ್ಟಿಯಿಂದ ಇದನ್ನು ಮುಂದಕ್ಕೆ ಹಾಕಿದೆ. ಆದಷ್ಟು ಬೇಗ [illegible] ಕೆಲಸವನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

(ಪ್ರಶ್ನೆ ನಂ. 314 (586)

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೩೧೪ (೫೮೬)ಕ್ಕೆ ಸಂಬಂಧಪಟ್ಟ ಶ್ರೀ ಕೆ. ರಾಮಭಟ್‌ರವರ ಪ್ರಶ್ನೆಗೆ ಉತ್ತರ ನೀಡಲು ಸಹಕಾರ ಸಚಿವರು ಇಲ್ಲವೇ ಇರುವುದರಿಂದ ಮಾನ್ಯ ಸದಸ್ಯರ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ. ಅವರ ಮಗಳಿಗೆ ಮದುವೆಯಂತೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ಕಳೆದ ೩-೪ ದಿವಸಗಳಿಂದಲೂ ಮಾನ್ಯ ಸಹಕಾರ ಸಚಿವರು ಸದನಕ್ಕೆ ಬಂದಿಲ್ಲ. ಅವರ ಮಗಳಿಗೆ ಮದುವೆ ಇರುವುದರಿಂದ ಅವರು ತಯಾರಿ ಮಾಡಿಕೊಳ್ಳುವುದಕ್ಕೆ ಹೋಗಿರಬಹುದು. ಆದರೆ ಪತ್ರಿಕೆಯಲ್ಲಿ ಪ್ರವಾಸ ಕಾರ್ಯಕ್ರಮ ಎಂದು ಇದೆ. ಅವರು ನಿಮಗೆ ಪತ್ರವನ್ನೇನಾದರೂ ಬರೆದಿದ್ದಾರೆಯೆ? ತಮ್ಮ ಅಪ್ಪಣೆಯನ್ನು ಕೇಳಿದ್ದಾರೆಯೇ.

ಅಧ್ಯಕ್ಷರು.—ಅವರ ಮಗಳಿಗೆ ಮದುವೆ ನಿಶ್ಚಯವಾಗಿದೆಯಂತೆ. ಅದಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳಲು ಹೋಗಿರಬಹುದು. ಅಲ್ಲದೆ ಪ್ರವಾಸ ಕಾರ್ಯಕ್ರಮ ಬೇರೆ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸದನಗಳು ನಡೆಯುವಾಗ ಮಂತ್ರಿಗಳು ಯಾವ ಪ್ರವಾಸ ಕಾರ್ಯಕ್ರಮಗಳನ್ನೂ ಹಾಕಿಕೊಳ್ಳಬಾರದು, ಸದನಕ್ಕೆ ತಪ್ಪಿಸಿಕೊಳ್ಳಬಾರದೆಂದು ಎಷ್ಟುಸಾರಿ ಹೇಳಿದರೂ ಅವರು ಕೇಳುತ್ತಿಲ್ಲ ಇವರಿಗೆ ಜವಾಬ್ದಾರಿ ಇದೆಯೆ? ಪತ್ರಿಕೆಯಲ್ಲಿ ನೋಡಿದರೆ ಪ್ರವಾಸ ಕಾರ್ಯಕ್ರಮ ಎಂದು ಇದೆ. ಅವರ ಮಗಳ ಮದುವೆ ಇರುವುದು ಒನೇ ತಾರೀಖು. ಇವತ್ತು ಸದನಕ್ಕೆ ಬರುವುದಕ್ಕೆ ಏನಾಗಿತ್ತು? ತಮಗೆ ಪತ್ರವನ್ನು ಏನಾದರೂ ಬರೆದಿರುವರೆ?

ಅಧ್ಯಕ್ಷರು.—ಅವರು ನನಗೆ ಪತ್ರ ಬರೆದು, ನಾನು ಸದನಕ್ಕೆ ಬರುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಶ್ರೀ ಕೆ. ರಾಮಭಟ್.—ಸ್ವಾಮಿ, ಕರ್ನಾಟಕದ ಕೊನೆಯ ಗಡಿಯವರೆಗೂ ಕಾರ್ಯಕ್ರಮ ಇರುತ್ತವೆ. ಆದರೆ ಇದು ಅಧಿಕೃತ ಪ್ರವಾಸವೆ?

ಅಧ್ಯಕ್ಷರು.—ತಾವು ತಮ್ಮ ಪ್ರಶ್ನೆಯನ್ನು ಹಾಕಿದರೆ ಮಾನ್ಯ ಆರ್ಥಿಕ ಸಚಿವರು ಉತ್ತರ ಕೊಡುತ್ತಾರೆ.

Misappropriation in Agriculture Seva Sahakari Sangha in Bantwal Taluk.

586 SRI K. RAMABHAT (Puttur).—Will the Minister for Co-operation be pleased to state:-

(a) whether it has come to their notice that irregularities and malpractices in the dealings of fertilizers and insecti-cides in the

month of August 1978 in Punacha Agriculture Service Co-operative Society, Bantwal Taluk in South Canara District have occured:

(b) the person responsible for these malpractices;

(c) the steps taken by them in this behalf?

SRI A.B. JAKANUR (Minister for Co-operation).—

(a) Yes.

(b) Secretary is responsible for this malpractice.

(c) The concerned Extension Officer, Co-operation was ordered to conduct enquiry into this affair and on the basis of the enquiry report of the Extension Officer, a show cause Notice has been issued with a view to take deciplinary action against the Secretary of the Society. Action will be taken very soon.

ಶ್ರೀ ಕೆ. ರಾಮಭಟ್.—ಪುಣಚ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ, ಅಕ್ರಮ ಯಾರಿಂದ, ನಡೆದಿದೆ ಮತ್ತು ಎಷ್ಟು ನಡೆದಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಸಹಕಾರ ಸಚಿವರ ಪರವಾಗಿ).—ಅಲ್ಲಿನ ಮಾಜಿ ಅಧ್ಯಕ್ಷ ಯು.ಟಿ. ಮೊಹಿದಿನಬ್ಬರವರಿಂದ ೨೦-೩೦ ಪೈಸೆ ಲ್ಯಾಪ್ಸ್ ಆಗಿದೆ ಅಷ್ಟೆ.

ಶ್ರೀ ಕೆ. ರಾಮಭಟ್.—ಮಾನ್ಯ ಸಚಿವರಿಗೆ ಪೂರ್ಣ ವಿವರ ಗೊತ್ತಿಲ್ಲದಿರುವುದರಿಂದ ಈ ರೀತಿ ಹೇಳುತ್ತಿದ್ದಾರೆಂದು ತಿಳಿಯುತ್ತಿದೆ ಪುಣಚ ಸಹಕಾರ ಸಂಘದಿಂದ ೨೦ ಚೀಲ ಸಾಗಲ, ೨೦ ಚೀಲ ವಿಜಯ ಗೊಬ್ಬರವನ್ನು ಕಳುಹಿಸಲಾಗಿತ್ತು. ಆದರೆ ಅದು ಎಲ್ಲಿಗೆ ತಲುಪ ಬೇಕಾಗಿತ್ತೋ ಅಲ್ಲಿಗೆ ತಲುಪಿಲ್ಲ, ಬೇರೆ ಕಡೆಮಾರಾಟವಾಗಿದೆ. ಇದು ತಮಗೆ ಗೊತ್ತಿಲ್ಲ ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಕ್ರಮ ನಡೆದಿರುವುದರ ಬಗ್ಗೆ ಆ ಸೊಸೈಟಿಯ ಕಾರ್ಯದರ್ಶಿಯವರಿಗೆ ಷೋಕಾಸ್ ನೋಟೀಸನ್ನು ಕೊಟ್ಟಿದ್ದೇವೆ.

ಶ್ರೀ ಕೆ. ರಾಮಭಟ್.—ಇದರ ಅಧ್ಯಕ್ಷರಾಗಿರುವವರ ಸ್ವಂತ ವ್ಯವಹಾರವೇನು? ಮಾನ್ಯ ಯು.ಟಿ. ಮಹಮದ್ ಮತ್ತು ಅವರ ಮಕ್ಕಳು ಅವರ ಸ್ವಂತ ವ್ಯವಹಾರದಿಂದ ಇಲ್ಲಿ ಅಧಿಕಾರ ದುರು ಪಯೋಗವಾಗಿದೆಯೆಂಬ ಸಂಶಯವಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮಾನ್ಯ ಹಣಕಾಸಿನ ಸಚಿವರು).—ಇದರಲ್ಲಿ ವಿಚಾರ ಇರುವುದು ಇಷ್ಟೆ. ಅಲ್ಲಿನ ಕಾರ್ಯದರ್ಶಿಯವರ ಮೇಲೆ ವಿಚಾರಣೆಯಲ್ಲಿ ತಪ್ಪು ಕಂಡುಬಂದಿದೆ, ಅವರು ಆ ಹಣವನ್ನು ಸಂಘಕ್ಕೆ ತುಂಬಿಸಿದ್ದಾರೆ ಆಮೇಲೆ ಯಾವರೀತಿ ಅವ್ಯವಹಾರ ಅಥವಾ ಯಾವುದೇ ತೊಂದರೆ ಆಗಿಲ್ಲ.

ಶ್ರೀ ಕೆ. ರಾಮಭಟ್.—ಈಗ ಸಂಘದ ಅಧ್ಯಕ್ಷರಾಗಿರುವವರ ಕೈವಾಡ ಇದರಲ್ಲಿದೆ. ಇದು ಏನಾಗಿದೆ ಎಂದರೆ ಕೋತಿ ಮೊಸರನ್ನು ತಿಂದು ಮೇಕೆ ಬಾಯಿಗೆ ಒರಸಿದಂತೆ ಕಾರ್ಯದರ್ಶಿಯವರ ಮೇಲೆ ತಪ್ಪನ್ನು ಹೊರಿಸಿದ್ದಾರೆ. ಅಧ್ಯಕ್ಷರು ಸ್ವಂತ ವ್ಯವಹಾರ ಇಟ್ಟುಕೊಂಡು ಈ ರೀತಿ ಅವ್ಯವಹಾರ ನಡೆಸಿದ್ದಾರೆ ಆದ್ದರಿಂದ ಮತ್ತೆ ತನಿಖೆ ಮಾಡಿ ನಿಜವಾದ ತಪ್ಪಸ್ಥರಿಗೆ ಶಿಕ್ಷೆ ಮಾಡಂತ್ತೀರಾ ಸ್ವಾಮಿ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರಿಗೆ ಸ್ವಂತ ವ್ಯವಹಾರವಿದೆಯೇ, ಇಲ್ಲವೇ ಅದರ ಪ್ರಶ್ನೆ ಇಲ್ಲಿ ಬರುವುದಿಲ್ಲ, ಸಹಕಾರ ಸಂಘದ ಕಾರ್ಯದರ್ಶಿಯವರು ತಪ್ಪಿತಸ ರೆಂದು ಕಂಡಿದ್ದರಿಂದ ಅವರಿಗೆ show cause notice ಕೊಟ್ಟಿದ್ದಾರೆ, ವಿಚಾರಣೆ ನಡೆದಿದೆ. ವಿಚಾರಣೆ ಏನಾದರೂ ಸರಿಯಾಗಿ ನಡೆದಿಲ್ಲ ಎಂದು ಹೇಳಿದರೆ ಮತ್ತೆ ವಿಚಾರಣೆ ಮಾಡಬೇಕೋ ಎಂಬುದನ್ನು ನೋಡೋಣ.

ಶ್ರೀ ಕೆ. ರಾಮಭಟ್.—ಮಾನ್ಯ ಮಂತ್ರಿಗಳು ತನಿಖೆ ಸರಿಯಾಗಿ ನಡೆದಿಲ್ಲವೆಂದು ಹೇಳಿದರೆ ಪುನಃ ಸರಿಯಾದ ತನಿಖೆ ಮಾಡಿಸುತ್ತೇವೆಂದು ಹೇಳಿದ್ದಾರೆ ಆದ್ದರಿಂದ ತನಿಖೆ ಸರಿಯಾಗಿ ನಡೆದಿಲ್ಲದಿರುವುದರಿಂದ ಮತ್ತೊಮ್ಮೆ ಸರಿಯಾಗಿ ತನಿಖೆ ನಡೆಸಬೇಕೆಂದು ಹೇಳಿಕತ್ತೇನೆ.

ಶ್ರೀ ಎ.ಜಿ. ಕೊಡಗಿ.—ತನಿಖೆಯ ವರದಿ ಯಾವಾಗ ಬಂದಿದೆ. ಕಾರ್ಯದರ್ಶಿಯವರನ್ನು ಅಲ್ಲೇ ಇಟ್ಟುಕೊಂಡು ತನಿಖೆ ನಡೆಸಿದರೆ ಏನು ಪ್ರಯೋಜನ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸಹಕಾರ ಸಂಘದ ರಿಜಿಸ್ಟ್ರಾರ್‌ರವರು ಅವರ ಅಧಿಕಾರಿಗಳಿಂದ ಕಾನೂನಿನ ಪ್ರಕಾರ ಆದರೆ ತನಿಖೆ ಮಾಡಿಸಿದ್ದಾರೆ ತನಿಖೆಯ ವರದಿ ಯಾವಾಗ ಬಂತು ಎಂಬ ಬಗ್ಗೆ ನನ್ನ ಹತ್ತಿರ ಸದ್ಯದಲ್ಲಿ ವಿವರಗಳು ಇಲ್ಲ.

ಶ್ರೀ ಎ.ಜಿ. ಕೊಡಗಿ.—೨ ವರ್ಷಗಳ ಹಿಂದೆ ವರದಿ ಬಂದಿದ್ದು ತನಿಖೆ ಇತ್ತೀಚೆಗೆ ನಡೆದದ್ದು ಸರಿಯಲ್ಲ. ಹೊಣೆಯನ್ನು ಕಾರ್ಯದರ್ಶಿಯವರ ಮೇಲೆ ಹೊರಿಸಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕಾರ್ಯದರ್ಶಿಯವರಿಗೆ ನೋಟೀಸ್ ಕೊಟ್ಟಿದ್ದು ೫-೪-೮೦ಕ್ಕೆ ವಿಚಾರಣೆ ನಡೆದಿರುವುದು ೫-೧೨-೭೯ರಲ್ಲಿ ಆದ್ದರಿಂದ ಹೆಚ್ಚು ತಡವೇನೂ ಆಗಿಲ್ಲ.

Irrigation of lands in Shimoga District by digging 30 bore-wells

639. S. M. SHEERANALY CHANDRASHEKAR (Hosanagar).—Will the Minister for Transport and Minor Irrigation be pleased to state.—

(*a*) Whether there is a proposal before the Government to irrigate the lands in Kumsi and Harnahalli hoblies of Shimoga by digging 30 bore-wells in each hobli ;

(*b*) if so, on what date the work will be taken up and completed?

SRI M.M.J. SADYOJATHA (Minister for Transport and Minor Irrigation).—

(*a*) No.

(*b*) Does not arise.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಸ್ವಾಮಿ ನಿನ್ನೆ ಬಾಂಬ್ ನನ್ನ ಮೇಲೆ ಬಿದ್ದಿದೆ. ಕಳೆದ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು ಉತ್ತರಕೊಡುವಾಗ Administrative sanction ತೆಗೆದುಕೊಂಡಿದೆ ಆದನ್ನು ಕಾರ್ಯಗತ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದರು. ಆದರೆ ಈಗ ನಮಗೆ ಬೇಕಾದ ಮಂತ್ರಿಗಳು ಬಂದಿದ್ದಾರೆ, ಇದನ್ನು ಆದಷ್ಟು ಜಾಗ್ರತೆ ಮಾಡಿಸಿಕೊಡಲಿ ಎಂದು ಪುನಃ ಅದೇ ಪ್ರಶ್ನೆಯನ್ನು ಕೇಳಿದೆ, ಆದರೆ ಇವರು ವಿರುದ್ಧವಾದ ಉತ್ತರ ಕೊಟ್ಟಿದ್ದಾರೆ, ಇದು ಏನು ಸ್ವಾಮಿ?

SRI. M.M.J. SADYOJATHA.—I will get the entire scheme re-examined.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ಕೇಳಿದ್ದು re-examine ಮಾಡಿಸಬೇಕೆಂದಲ್ಲ ಹಿಂದೆ ತಮ್ಮ ಇಲಾಖೆಯನ್ನು ಹೊಂದಿದ್ದಂತಹ ಮಂತ್ರಿಗಳು ಕೆಲಸವನ್ನು ಪ್ರಾರಂಭಮಾಡಿ ಸುತ್ತೇನೆಂದು ಹೇಳಿದ್ದರು. ಆದರೆ ನಾನು ಈ ಪ್ರಶ್ನೆಯನ್ನು ಹಾಕಿದ್ದು ಕೆಲಸ ಜರೂರಾಗಿ ನಡೆಯಲಿ ಎಂದು ಜೊತೆಗೆ ನಮ್ಮ ಸ್ನೇಹಿತರೇ ಆದ ಸದ್ಯೋಜಾತಪ್ಪನವರು ಈ ಇಲಾಖೆಯನ್ನು ಹೊಂದಿದ್ದಾರೆ ಬೇಗ ಕೆಲಸಮಾಡಿಸಲಿ ಎಂದು.